Regd No M 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 137] ಗುರುವಾರ 15—4—48 [ಬಿಡಿ ಪ್ರತಿ 3 ಪೈ

ಮರಣ ದಂಡನೆ ಇರಲಿ

ಆರೋಗ್ಯ ವಿಮೆ

ಭಾರತ ಕಾರ್ಮಿಕ ಮಂತ್ರಿ ಜಗಜೀವನ ರಾಂರವರು ಪ್ರತಿಪಾದನೆಮಾಡಿದ ಆರೋಗ್ಯವಿಮೆ ಬಿಲ್ಲು ಇಂಡಿಯಾ ಪಾರ್ಲಿಮೆಂಟಿನಲ್ಲಿ ಚರ್ಚೆಯಲ್ಲಿದೆ. ಜಾಗ್ರತೆಯಲ್ಲಿ ಸ್ವಾವಿಡೆಂಟು ವಿಮೆಗಳು ಜಾರಿಗೆ ಬಂಲಿವೆ. ಕಾರ್ಮಿಕರ ಕುಟುಂಬಗಳಿಗೆ ಸದಾ ವೈದ್ಯ ಸಹಾಯವನ್ನು ಉಚಿತವಾಗಿ ಪಡಿಸುವ ಏರ್ಪಾಡುಗಳು ಕೆಲವು ಸ್ಥಳಗಳಲ್ಲಿರುವವೆಂದು ಅವರು ಸೂಚಿಸಿರುವರು. ಕಾರ್ಮಿಕರು ಸರ್ಕಾರಿ ಯಜಮಾನರು ಎಲ್ಲರೂ ಈ ಆರೋಗ್ಯ ವಿಮೆಗೆ ತಮ್ಮ ಉತ್ಪತ್ತಿಯಲ್ಲಿ ಸ್ವಲ್ಪ ಭಾಗವನ್ನು ಕೊಡಬೇಕಾಗುವುದು, ದಿನಕ್ಕೆ ರೂಪಾಯಿಗೆ ಒಳಪಟ್ಟ ಆದಾಯವಿರುವ ಕಾರ್ಮಿಕರು ಮಾತ್ರ ನಿಧಿಗೆ ಏನನ್ನೂ ಕೊಡಬೇಕಾಗಿರುವುದಿಲ್ಲ

ನಿಜಾಮ ಜೈಲು ತುಂಬುತ್ತಿವೆ

ನಿಜಾಮ ಹೈದರಾಬಾದಿನ ಬೇರೆ ಬೇರೆ ಜೈಲುಗಳಲ್ಲಿ ಇದುವರೆಗೂ ಸುಮಾರು 5000 ರಾಜಕೀಯ ಖೈದಿಗಳು ಇಡಲ್ಪಟ್ಟಿದ್ದಾರೆ, ಕಾಂಗ್ರೆಸ್ ಕಾರ್ಯಕರ್ತರ ಬಂಧನಗಳು ಇನ್ನೂ ನಡೆದಿರುವುದೆಂದು ಧಿಕೃತ ರೀತಿಯಲ್ಲಿ ತಿಳಿದು ಬಂದಿದೆ.

ಇತ್ತೆಹಾದ್ ಗೂಢಚಾರರು

ಹೈದರಾಬಾದು ಇತ್ತೆಹಾದ್ ಸಂಸ್ಥೆಯು ತನ್ನ ಗೂಢಚಾರರನ್ನು ಬೊಂಬಾಯಿ, ವಿದರಾಸು, ಬೀರಾರು, ಉತ್ತರ ಸರ್ಕಾರ್, ಗೋವಾ ಮತ್ತಿತರ ಪ್ರದೇಶಗಳಿಗೆ ಕಳುಹಿಸಿದೆಯೆಂದು ಸುದ್ದಿ.

ಸುಮಾರು 2100 ಟ್ಕ್ ಕಾನ ಡಾ ನ್ಯೂಸ್‌ಪ್ರಿಂಟು ಕಾಗದವು ಈ ವರ್ಷ ಪ್ರಥಮದಲ್ಲಿ ಪಾಕಿಸ್ತಾನಕ್ಕೆ ಬಂದಿದೆ;

ವರ್ತಮಾನ ಸಂಗ್ರಹ

ಪುದರಾಸು.... ಇತ್ತೆಹಾದ್ ಸಂಸ್ಥೆಯು ಮಾಡುತ್ತಿರುವ ಅವಾಂತರ ಅಪಾಯಕರ ಪರಿಣಾಮವನ್ನುಂಟು ಮಾಡುತ್ತದೆ ; ಇಂದಲ್ಲದಿದ್ದರೆ ನಾಳೆಯಾದರೂ ಹೈದರಾಬಾದು ಪ್ರಜಾಶಕ್ತಿಗೆ ತಲೆಬಾಗಲೇ ಬೇಕಾಗುತ್ತದೆ— ಎಂದು ಅಲಿ ಮುಹಮದ್ ಖಾಕ್ ಎಂಬ ಉರ್ದು ಪತ್ರಿಕಾ ಸಂಪಾದಕರೊಬ್ಬರು ತಿಳಿಸಿರುತ್ತಾರೆ.

ಸಿಂಧಿನಿಂದ ಹಿರೆದೂ ಸಿಕ್ಕರು ಹೊರ ಬರುತ್ತಿರುವರು ; ಒಂದು ತಿಂಗಳಲ್ಲಿ ಅಲ್ಲಿ ಈ ಜಾತಿ ಜನರೊಬ್ಬರು ಇರುವುದಿಲ್ಲವೆಂದು ಹೇಳಲಾಗಿದೆ

ಕಟಕ್— ಪಂ || ನೆಹರು ನೂತನ ಠಾಜದಾನಿ ಭುವನೇಶ್ವರದ ಶಂಕು ಸ್ಥಾಪನೆ ಮಾಡಿದರು

ಅಖಿಲ ಮೈಸೂರು ಹರಿಜನ ಸಮ್ಮೇಳನವು ಕೆಂಗೇರಿಯಲ್ಲಿ ಮೇ ತಿಂಗಳು ಎರಡನೇ ವಾರದಲ್ಲಿ ನಡೆಯುವುದು.

ಮೈಸೂರು ಮಹಾರಾಜರು ಕೊಚಿಕ್ ಸರಕಾರಕ್ಕೆ ಪಾರಿತೋಷಕವಾಗಿ ಕೊಟ್ಟಿರುವ ಮೃಗಗಳ ಮತ್ತು ಇತರ ವಸ್ತುಗಳ ಬೆಲೆಯು ಸುಮಾರು ಒಂದು ಲಕ್ಷ ರೂ. ಗಳೆಂದು ಹೇಳಲಾಗಿದೆ

ಜಮ್ಮು ಮತ್ತು ಕಾಶ್ಮೀರಗಳಲ್ಲಿ ಕೆಲವು ರಣರಂಗಗಳಲ್ಲಿ 20 ಸಾವಿರಕ್ಕಿಂತ ಹೆಚ್ಚು ಧಾಳಿಕಾರರು ಇದ್ದುದಲ್ಲಿ ತೊಡಗಿರುವರೆಂದು ಈಸ್ಟರ್ನ್ ಕಮ್ಯಾಂಡ್ ಹೆಡ್‌ಕ್ವಾರ್ಟರ್ಸಿನವರಿಂದ ಈಗಾಗಲೇ ಪ್ರಕಟಿಸಲಾಗಿದೆ

ಮರಣ ದಂಡನೆ ಇರಲಿ!

ಲಂಡನ್ ಏ 14— ಮರಣದಂಡನೆ ರಬೇಕೆಂಬ ಸರಕಾರಿ ಸೂಚನೆಯು ಮೇ ಎಲ್ಲರೂ ಸ್ವತಂತ್ರ ಓಟು ಚಲಾಯಿ ಬಹುದಾದರೂ ಶಿಸ್ತಿಗಾಗಿ ಮಂತ್ರಿಗಳ್ಲರೂ ಸರಕಾರಕ್ಕೇ ಬೆಂಬಲವೀಯುವರೆಂದು ಹೇಳಲಾಗಿದೆ

.....

ಅಮೇರಿಕಾದಲ್ಲಿ ಹೊಸದಾಗಿ 1500 ಕ್ಯಾಸ್ಟುಗಳನ್ನು ತಯಾರಿಸುವರು.

ಬೊಂಬಾಯಿ.... ಭಾರತ ರಾಜ್ಯಾಂಗ ಮಂತ್ರಿ ಡಾ || ಅಂಬೇಡ್ಕರರಿಗೆ 56 ವರ್ಷ : ಇವರು 40 ವರ್ಷದ ಸಾರಸ್ವತ ಬ್ರಾಹ್ಮಣ ಸ್ತ್ರೀ ಡಾ || ಲಕ್ಷ್ಮಿ ಕಬೀರಳೆಂಬುವಳನ್ನು ವಿವಾಹಮಾಡಿಕೊಳ್ಳುವುದು ವದಂತಿ

ಂಡನ್ನಿನಲ್ಲಿ ಔದ್ಯೋಗಿಕ ಸ್ರದವು ತೆರೆಯಲ್ಪಡುವುದು. ಅದರಲ್ಲಿ ವಿಷರ 3 ಸಾವಿರ ಹೊಸ ಶೋಧಗ ಪ್ರದರ್ಶಿಸಲ್ಪಡುವುವು.

ಬಾದು ಸ್ವತಂತ್ರ ಪಠಾಣರ ಸರದಾರ ವಲ್ಲಭ್‌ಭಾಯ್‌ರಿಗೊಂಕ ಪತ್ರ ಕಳಿಸಿ, ಭಾರತ ಸರಕಾರವು ಹೈದರಾಬಾದು ಮುಸ್ಲಿಂ ಸಂಸ್ಥಾನದ ವಿರುದ್ಧ ಏನಾದರೂ ಉಪಾಯ ಕೈಕೊಂಡರೆ, 15 ಲಕ್ಷ ಸಶಸ್ತ್ರ ಪಠಾಣರು ಅದನ್ನು ವಿರೋಧಿಸಿ ಹೈದರಾಬಾದು ಸಂಸ್ಥಾನದ ಗಡಿಗುಂಟ ಕಾವಲು ನಿಂತು ಹೋರಾಡುವುದಾಗಿ ತಿಳಿಸಿದ್ದಾರೆ

ವುಡ್‌ಲ್ಯಾಂಡ್ಸ್

From 9—4—48

Homi Wadia Production

BACHPAN

ಬೇಬಿ ಮಾಧುರಿ, ಮಜರ್ ಖಾನ್ ವೀಕ್ಷಿತ್, ನಂದ್ರೇಕರ್ ಮೊದಲಾದವರ ಪಾತ್ರವಹಿಸಿರುವ

ಬಚ್‌ಪನ್

(ಶ್ರೇಷ್ಠ ಶ್ರೇಣಿಯ ಹಿಂದಿ ಚಿತ್ರ)

ಪ್ರತಿದಿನ 3 ಆಟಗಳು

ಆರಬ್ ಯಹೂದಿ ಕದನ

ಜರೂಸೆಲಂ ಏ 13— ಜರೂಸೆಲಂ ಹೊರಗೆ ಮೌಂಟು ಸ್ಕೋಪಸ್ನಲ್ಲಿ ಅರಬರಿಗೂ ಯಹೂದಿಗಳಿಗೂ 6 ಗಂಟೆ ಕದನ ನಡೆದು 40 ಮಂದಿ ಯಹೂದಿಗಳು ಹತರಾದರು.

ಹೈದರಾಬಾದಿನಲ್ಲಿ ಇಸ್ಲಾಮಿಯಾ ರಾಜ್ಯಾಡಳಿತ

ಹೈದರಾಬಾದು ಏ 14— ಹೈದರಾಬಾದು ಶಾಸನಸಭಾ ಸದಸ್ಯರಾದ ಸಯದ್ ಅಲೀಮರು, ಎರಡು ಸಾವಿರಕ್ಕೆ ಮೇಲ್ಪಟ್ಟ ಸಶಸ್ತ್ರ ರಜಾಕರನ್ನು ಕುರಿತು ಮಾಡಿದ ಭಾಷಣದಲ್ಲಿ. ಭಾರತ ಒಕ್ಕೂಟವು ಹೈದರಾಬಾದಿನ ಸ್ವಾತಂತ್ರ್ಯವನ್ನು ಮಟ್ಟಹಾಕಲು ಹವಣಿಸುತ್ತಿರುವುದಂದೂ, ನಾವು ಕಾಪಾಡಿಕೊಳ್ಳಲು ನಮ್ಮ 35 ಲಕ್ಷ ಮುಸ್ಲಿಂರ ಬೊತೆಗೆ 45 ಲಕ್ಷ ಹಿಂದುಳಿದವರ ಮತ್ತು ಬಹು ಮಂದಿ ಕ್ರಿಯಸ್ತರ ಬೆಂಬಲವಿದೆ ಎಂದರು

ಬೆಂಗಳೂರು — ವಿಶ್ವಕರ್ಣಾಟಕ ದಿನ ಪತ್ರಿಕೆಯು ಜನವರಿ 31 ನೇ ತಾರೀಖಿನ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವಿಷಯದ ಬಗ್ಗೆ ಈ ತಿಂಗಳು ತಾ || 12 ರಂದು ಡಿ || ಮ್ಯಾಜಿಸ್ಟ್ರೇರ ಎಚ್ಚರಿಕೆ ಪತ್ರವು ಪೋಲೀಸು ದಫೇದಾರೊಬ್ಬರ ಮೂಲರ ಜಾರಿಮಾಡಲಾಯಿತೆಂದು ತಿಳಿಯಬಂದಿದೆ ಪ್ರಜಾ ಸರಕಾರದಲ್ಲಿ ಇತಹ ನಡವಳಿಕೆ ಚನ್ನಾಗಿಲ್ಲ.

ಬೊಂಬಾಯಿ.... ಚೌಪಾತೀ ತೀರದಲ್ಲೊಂದು 5 ಅಂತಸ್ತಿನ ಮನೆಗೆ ಬೆಂಕಿ ಬಿದ್ದು ತುಂಬಾ ನಷ್ಟವಾಗಿದೆ, ಬೆಂಕಿಯನ್ನು ಹತೋಟಿಗೆ ತರಲು 12 ಫೈರು ಎಂಜಿನ್ನುಗಳು 3 ಗಂಟೆ ಕಾಲ ಕೆಲಸ ಮಾಡಿದವಂತೆ.

Woodlands

Morning Shows at
for 4 Days From 16
United Artists Pre
George Saunders
Carole Landis in
A Scandal In Pa

ಗಾಂಗಾಜಲ

[ಮುಂದುವರಿದುದು]

ಗದಗಾಜಲವನ್ನು ಎಷ್ಟೇ ವರ್ಷ ಪರ್ಯಂತ ತುಂಬಿಟ್ಟಿದ್ದಾವರೂ, ಈ ಜಲವು ಕೆಡುವುದೂ ಇಲ್ಲ. ಇದರ ಬಣ್ಣ ಮಾರ್ಪಡುವುದೂ ಇಲ್ಲ. ಇದರಲ್ಲಿ ಕ್ರಿಮಿಗಳು ಉಂಟಾಗುವುದಿಲ್ಲ ; ಜಲದ ಸ್ವಾದವೂ ಬದಲಾಯಿಸುವುದಿಲ್ಲ : ಸದೈವ ಒಂದೇ ತೆರನಾಗಿರುತ್ತದೆ : ಈ ಜಲದಲ್ಲೆಂದೂ ಬಲೆಗಟ್ಟುವುದಿಲ್ಲ : ಅಲ್ಲದೆ ಥಂಗೆಯ್ಯಲ್ಲಿ ಅನ್ಯನೀರುಗಳಂತೆ ಹೊಲಸು ಜೀವಗಳೂ ಬೀಳುವುದಿಲ್ಲ. ಗಂಗಾಜಲದಲ್ಲಿ ಸ್ನಾನಮಾಡಿದಮೇಲೆ ಜ್ವರಿನ ದುರ್ವಾಸನೆ ಬರುವುದಿಲ್ಲವೆಂಬುದನ್ನು ಕಾಣಬಹುದು.

ಗಂಗಾಜಲದಲ್ಲಿರುವ ಇದೇ ಸೂಕ್ಷ್ಮ ಮತ್ತು ಸೂಕ್ಷ್ಮ ದೈವಶಕ್ತಿಯನ್ನು ಅನುಭವಗಂಡು, ಆಯುರ್ವೇದಗ್ರಂಥಗಳಲ್ಲಿ ಗಂಗಾ ಸ್ನಾನ ಪಾನಗಳ ಇಷ್ಟು ಮಹತ್ವವನ್ನು ವರ್ಣಿಸಲಾಗಿದೆ. ಅಲ್ಲದೆ ಆಯುರ್ವೇದಶಾಸ್ತ್ರದ ಜ್ಞಾತರುಗಳೂ —' ಶರೀರೇ ಜರ್ಝರೀಭೂತೇ ವ್ಯಾಧಿಗ್ರಸ್ತೇ ಕಲೇವರೇ ! ಔಷಧಂ ಜಾಹ್ನವೀತೋಯಂ ವೈದ್ಯೋ ನಾರಾಯಣೋ ಹರಿಃ ! ' ಎಂದು ಹೇಳಿ ಭಗವತೀ ಭಾಗೀರಥಿಯೇ ಮುಂದೆ ನತಮಸ್ತಕರಾಗಿರುವರು.

ಗಂಗಾಜಲದ ಈ ಉಪಯೋಗತೆಯ ಕಾರಣದಿಂದಲೇ ಅನಾದಿ ಕಾಲದಿಂದ ರಾಜರುಗಳಿಂದ ಹಿಡಿದು ನಿರ್ಧನರುಗಳವರೆಗೆ ಇದರ ಪ್ರಯೋಗವು ನಡೆದು ಬರುತ್ತಾ ಇದೆ. ಕೇವಲ ಹಿಂದೂಗಳಲ್ಲಿ ಮಾತ್ರವೇ ಅಲ್ಲ, ಮುಸ್ಲಿಂ ಶಾಸನ ಕಾಲದಲ್ಲಿಯೂ ಬಾದಷಹರುಗಳು ಪ್ರಮುಖ ಹಲುಗಳಲ್ಲಿ ಗಂಗಾಜಲವೇ ಉಪಯೋಗಿಸಲ್ಪಡುತ್ತಿತ್ತು. ಹದಿನಾಲ್ಕನೆಯ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ ಇಬ್ನ್ ಬತೂತಾ ಎಂಬುವನು —' ಸುಲ್ತಾನ್ ಮಹಮ್ಮದ್ ತುಗ್ಲಕ್‌ನ ಸಲುವಾಗಿ ಗಂಗಾಜಲವು ನಿರಂತರ ದೌಲತಾಬಾದಿಗೆ ಹೋಗುತ್ತಿದ್ದಿತ್ತು.' ಎಂದು ಬರೆದಿರುವನು.

ಅಬುಲ್ ಫಜಲನು ' ಆಈನೇ ಅಕ್ಬರಿ ' ಯಲ್ಲಿ — ' ಬಾದಷಹ ಅಕ್ಬರನು ಗಂಗಾಜಲವನ್ನು ಅವ್ಯಕ್ತವೆಂದು ಭಾವಿಸುವನು. ಅದರ ಬರುವಿಕೆಯು ಎರ್ರಾಬಿರ್ರಿಯಾಗಿ ಅತನು ಹಲವು ಯೋಗ್ಯ ವ್ಯಕ್ತಿಗಳನ್ನು ನಿಯೋಗಿಸಿದ್ದನು. ಅವನು ಮನೆಯಲ್ಲಾಗಲೀ ಯಾತ್ರೆಯಲ್ಲಾಗಲೀ ಗಂಗಾಜಲವನ್ನೇ ಕುಡಿಯುತ್ತಿದ್ದನು. ಆಡುಗೆಗೆ ಮಳೆಜಲವಾಗಲಿ, ಗಂಗಾಜಲವಾಗಲೀ ಉಪಯೋಗಿಸಲ್ಪಡುತ್ತಿದೆ ' ಎಂದು ಬರೆದಿರುವನು. (ಸಶೇಷ

At Opera

ಅಮೋಘ 2 ನೇ ವಾರ

ಕರ್ಣ್, ಲೀಲಾ, ಕೃಷ್ಣ್, ಮಧುರಂ ಪಾತ್ರವಹಿಸಿರುವ

ದೇವದಾಸಿ

[ತಮಿಳು]

Morning Shows from 16-4-48

THREE LITTLE GIRLS IN BLUE (Technicolor)

Save the Cow

ಗೋವಧೆ ನಿಲ್ಲಲಿ

Edited, Printed and Published by M S Krishna Rao at the Satyavadi Press, Chamaraj Agrahar, Mysore

ಪ್ರಭಾ

48 ರಿಂದ — ದಿನವಹಿ 3 ಆಟಗಳು

.... ಮಹಾತ್ಮಾರವರ ....

ಭಕ್ತರಾಮದಾಸ್

(ಕನ್ನಡ)



ಯುದ್ಧಕಾಲದಲ್ಲಿ ಎಮಾನ ಧಾಳಿಯಿಂದ ಹಾಳಾಗಿದ್ದ ಪ್ಲಿಮತ್‌ಪಟ್ಟಣ

Advertise in ' Satyavadi'

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯೂ ಹೂಗಳಿಂದ ಆರಿಸಿ ತೆಗೆದುದಾಗಿದೆ. ನಮ್ಮಿಂದ ಸ್ಪೆಷಲ್ಲಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಎನ್ನೊದೂ ಆಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ, ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ. ¼ ತೋಲಾ, ½ ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸ್.